Fax: 08282-256262
E-mail:kuvempuacademic@gmail.com

Phone No - 08282-256149
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

ಸಂಖ್ಯೆ:ಕುವಿ:ಶೈವಿ:ಎಸಿ–4(182): 3229 :2024–25 ದಿನಾಂಕ:21–11–2024

## ಸುತ್ತೋಲೆ

ವಿಷಯ: 2024–25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿಯಲ್ಲಿ ರಿಕ್ತ ಸ್ಥಾನಗಳನ್ನು ಭರ್ತಿ ಮಾಡಲು ಅನುಮತಿಸಿರುವ ಕುರಿತು.

ಉಲ್ಲೇಖ:
1. ವಿ.ವಿ. ಅಧಿಸೂಚನೆ ಸಂಖ್ಯೆ:ಕುವಿ:ಶೈವಿ:ಎಸಿ–4:**2570**:2024–25, ದಿನಾಂಕ:08–10–2024.
2. ವಿ.ವಿ. ಪರಿಷ್ಕೃತ ಅಧಿಸೂಚನೆ ಸಂಖ್ಯೆ:ಕುವಿ:ಶೈವಿ:ಎಸಿ–4:**2759**:2024–25, ದಿನಾಂಕ:21–10–2024.
3. ವಿ.ವಿ. ಪರಿಷ್ಕೃತ ಅಧಿಸೂಚನೆ–Iರ ಸಂಖ್ಯೆ:ಕುವಿ:ಶೈವಿ:ಎಸಿ–4:**2924**:2024–25, ದಿ:05–11–2024.
4. ದಿನಾಂಕ:19–11–2024ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
5. ದಿನಾಂಕ:20–11–2024ರಂದು ನಡೆದ ಡೀನರು ಮತ್ತು ಎಲ್ಲಾ ವಿಭಾಗಾಧ್ಯಕ್ಷರುಗಳ ಸಭೆಯ ನಿರ್ಣಯ.

*****

ವಿಶ್ವವಿದ್ಯಾಲಯದ 2024–25ನೇ ಸಾಲಿನ ಪ್ರಥಮ ವರ್ಷದ ಸ್ನಾತಕೋತ್ತರ ಪ್ರವೇಶಾತಿಗೆ ಸಂಬಂಧಿಸಿದಂತೆ ಉಲ್ಲೇಖಿತ(1), (2) **ಮತ್ತು (3)ರಲ್ಲಿ ಅಧಿಸೂಚನೆಗಳನ್ನು ಹೊರಡಿಸಲಾಗಿದ್ದು, ಪ್ರವೇಶಾತಿ ಕೌನ್ಸಿಲಿಂಗ್ ಪ್ರಕ್ರಿಯೆಗಳನ್ನು ದಿನಾಂಕ:14–11–2024 ಮತ್ತು 15–11–2024ರಂದು** ಆಯಾ ಸ್ನಾತಕೋತ್ತರ ವಿಭಾಗಗಳಲ್ಲಿ ನಡೆಸಲಾಗಿದೆ.

ಮುಂದುವರೆದಂತೆ, ಕೆಲವು ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ನಿಗದಿತ ಮೆರಿಟ್ ಕೋಟಾದಡಿ ಪ್ರವೇಶಮಿತಿ ಭರ್ತಿಯಾಗದಿರುವ ಕುರಿತು ದಿನಾಂಕ 20–11–2024ರ ವಿಭಾಗಾಧ್ಯಕ್ಷರ ಸಭೆಯ ನಿರ್ಣಯದನ್ವಯ, ಆಯಾ ವಿಭಾಗಕ್ಕೆ ನಿಗದಿ ಪಡಿಸಿರುವ ಪ್ರವೇಶಮಿತಿಗೊಳಪಟ್ಟು ಕೆಳಕಂಡಂತೆ ಪ್ರವೇಶಾತಿ ಮಾಡಿಕೊಳ್ಳಲು ಉಲ್ಲೇಖಿತ(4) ಮತ್ತು (5)ರನ್ವಯ ಈ ಕೆಳಕಂಡಂತೆ ಅನುಮತಿ ನೀಡಲಾಗಿದೆ.

1. ಮೆರಿಟ್ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಹಾಗೂ ಮೆರಿಟ್ ಕಮ್ ಪೇಮೆಂಟ್ ಸೀಟುಗಳನ್ನು ಮೆರಿಟ್ ಕಮ್ ಪೇಮೆಂಟ್ ಆಧಾರದ ಮೇಲೆ **ದಿನಾಂಕ:30–11–2024ರೊ**ಳಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ಪ್ರವೇಶಾತಿ ಮಾಡಿಕೊಳ್ಳಲು ಅನುಮತಿಸಲಾಗಿದೆ.
2. ಯಾವುದೇ ವಿಭಾಗಕ್ಕೆ ವಿದ್ಯಾರ್ಥಿಯು ವರ್ಗಾವಣೆ ಬಯಸಿದಲ್ಲಿ, ಆ ವಿದ್ಯಾರ್ಥಿಗೆ ಈಗಾಗಲೇ ಅರ್ಜಿ ಸಲ್ಲಿಸಿ, ಪ್ರವೇಶಾತಿ ಪಡೆದ ವಿಭಾಗದಲ್ಲಿ ಪ್ರವೇಶಾತಿ ರದ್ದುಪಡಿಸಿಕೊಂಡು, ವರ್ಗಾವಣೆ ಕೋರಿರುವ ವಿಭಾಗದಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಿ ಪ್ರವೇಶಾತಿ ಪಡೆಯಲು ಅನುಮತಿಸಲಾಗಿದೆ.
3. ಈಗಾಗಲೇ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸದೇ ಇದ್ದಲ್ಲಿ, ಅಂತಹ ವಿದ್ಯಾರ್ಥಿಗಳ ಅರ್ಜಿಗಳನ್ನು ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಅಳವಡಿಸಿಕೊಂಡು ಕಡ್ಡಾಯವಾಗಿ ದಿನಾಂಕ:**25–11–2024ರೊ**ಳಗೆ ವಿಶ್ವವಿದ್ಯಾಲಯಕ್ಕೆ ತಂತ್ರಾಂಶದ (submit to University) ಮೂಲಕ ಸಲ್ಲಿಸತಕ್ಕದ್ದು.
4. ದಿನಾಂಕ:25–11–2024ರ ನಂತರದಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳ ದಾಖಲೆಗಳನ್ನೂ ಸಹ ದಿನಾಂಕ:**30–11–2024ರೊ**ಳಗೆ ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಅಳವಡಿಸಿ ಕಡ್ಡಾಯವಾಗಿ ತಂತ್ರಾಂಶದ (submit to University) ಮೂಲಕ ಸಲ್ಲಿಸತಕ್ಕದ್ದು.
5. ಪ್ರವೇಶಾನುಮೋದನೆಗೆ ಮೇಲಿನ ಕ್ರಮವನ್ನು ಕಡ್ಡಾಯವಾಗಿ ಅನುಸರಿಸಿ, ಎಸ್.ಎಸ್.ಪಿ. ತಂತ್ರಾಂಶದಲ್ಲಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡುವಂತೆ ಈ ಮೂಲಕ ಎಲ್ಲಾ ವಿಭಾಗಾಧ್ಯಕ್ಷರುಗಳಿಗೆ/ಪ್ರಾಂಶುಪಾಲರುಗಳಿಗೆ ತಿಳಿಸಲಾಗಿದೆ.

ಮಾನ್ಯ ಕುಲಸಚಿವರ ಅನುಮೋದನೆಯಾಗಿದೆ

21/11/2024

ಉಪಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451

ಗೆ,

1) ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು/ ಸಂಯೋಜನಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2) ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಎಲ್ಲಾ ಸಂಯೋಜಿತ/ಘಟಕ ಕಾಲೇಜುಗಳ ಪ್ರಾಂಶುಪಾಲರಗಳಿಗೆ.

ಪ್ರತಿಗಳು:

1. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು: ಕುಲಸಚಿವರು(ಪ): ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಕಛೇರಿ ಪ್ರತಿ.